ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ,
ಕುಂದಾಪುರ

ಸಿ.ಸಿ. ನಂಬ್ರ:2387/2022

ಚಾಸಾ:2 ಪ್ರಾಸಾ:2

ದಿನಾಂಕ: 18.01.2024

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ರೆಹನ್ ಅಹಮ್ಮದ್ |
| ಗಂಡನ ಹೆಸರು | : | ಜಿ ಮಹಮ್ಮದ್ ರಫೀಕ್ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ವ್ಯವಹಾರ |
| ವಾಸ ಸ್ಥಳ | : | ತ್ರಾಸಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:</u>**

ಚಾಸಾ-1 ನನ್ನ ತಂಗಿ. ಚಾಸಾ-3 ನನ್ನ ತಂದೆ. ಚಾಸಾ-4 ನನ್ನ ತಂಗಿ. ಚಾಸಾ-5 ನನ್ನ ಹೆಂಡತಿ. ಆರೋಪಿ ನನ್ನ ಭಾವ. ಚಾಸಾ-1 ಮತ್ತು ಆರೋಪಿಯ ಮದುವೆಯು ದಿ: 29-07-2018 ರಂದು ತ್ರಾಸಿಯ ಕ್ಲಾಸಿಕ್ ಅಡಿಟೋರಿಯಂನಲ್ಲಿ ಆಗಿರುತ್ತದೆ. ಮದುವೆ ಪೂರ್ವದಲ್ಲಿ ಆರೋಪಿಯು ಯಾವುದೇ ವರದಕ್ಷಿಣೆ ಬೇಡಿಕೆ ಇಟ್ಟಿಲ್ಲ. ಆರೋಪಿಯು ಚಾಸಾ-1 ರವರಿಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆ ನೀಡಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲು: ಮಾನ್ಯ ಸ.ಸ.ಅ.ರವರಿಂದ:</u>**

ಮದುವೆಯ ಪೂರ್ವದಲ್ಲಿ ಆರೋಪಿ ತಮ್ಮ ಮನೆಯವರೊಂದಿಗೆ ಮದುವೆ ಮಾತುಕತೆಗಾಗಿ ನಮ್ಮ ಮನೆಗೆ ಬಂದಾಗ, ಆರೋಪಿಯ ಸೌದಿ ಅರೇಬಿಯಾದಲ್ಲಿ

ಉದ್ಯೋಗದಲ್ಲಿ ಇದ್ದುದರಿಂದ ವರದಕ್ಷಿಣೆಯಾಗಿ 30 ಪವನ್ ಚಿನ್ನಾಭರಣಗಳನ್ನು ಬೇಡಿಕೆ ಇಟ್ಟಿದ್ದು, ನನ್ನ ತಂದೆ ವರದಕ್ಷಿಣೆ ನೀಡಲು ನಿರಾಕರಿಸಿದ್ದು, ನಂತರ ಆರೋಪಿಯ ಒತ್ತಡಕ್ಕೆ 15 ಪವನ್ ಚಿನ್ನವನ್ನು ನೀಡಲು ಒಪ್ಪಿಕೊಂಡು ಮದುವೆ ಸಮಯದಲ್ಲಿ ವರದಕ್ಷಿಣೆಯಾಗಿ ಚಾಸಾ-1 ರವರಿಗೆ ಚಿನ್ನವನ್ನು ಹಾಕಿರುತ್ತೇವೆ ಎಂದರೆ ಸರಿಯಲ್ಲ.

ಮದುವೆಯ ನಂತರ ಆರೋಪಿಯು ಸಂತೆಕಟ್ಟೆಯಲ್ಲಿರುವ ಆತನ ಎಸ್ ಆರ್ ಐ ಮಂಜಿಲ್ ಗೆ ಕರೆದುಕೊಂಡು ಹೋಗಿದ್ದು, 26 ದಿನಗಳ ಕಾಲ ಚಾಸಾ-1 ರವರ ಜೊತೆ ಇದ್ದು ನಂತರ ಸೌದಿ ಅರೇಬಿಯಾಕ್ಕೆ ಹೋಗಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆರೋಪಿ ನಾವು ನೀಡಿದಂತಹ ಚಿನ್ನ ಕಡಿಮೆಯಾಯಿತು ಎಂದು ಹೇಳಿ ಚಾಸಾ-1 ರವರನ್ನು ಮೂದಲಿಸಿ ತಾತ್ಸಾರ ಮಾಡುತ್ತಿದ್ದು, ನಮ್ಮ ಮನೆಗೆ ಬಂದು ನನ್ನ ತಂದೆಯ ಬಳಿ 30 ಪವನ್ ಚಿನ್ನವನ್ನು ಹೆಚ್ಚಿನ ವರದಕ್ಷಿಣೆಯಾಗಿ ಕೇಳಿದ್ದು, ಅವರು ನಿರಾಕರಿಸಿದಾಗ ಆರೋಪಿ ಕೋಪಗೊಂಡು ಚಾಸಾ-1 ರವರಿಗೆ ಮಾನಸಿಕವಾಗಿ ಹಿಂಸೆ ನೀಡಿರುತ್ತಾರೆ ಎಂದರೆ ಸರಿಯಲ್ಲ.

ಚಾಸಾ-1 ರವರು ಕುಂದಾಪುರ ಭಂಡಾರ್ ಕಾರ್ ಕಾಲೇಜಿನಲ್ಲಿ ತಾತ್ಕಾಲಿಕ ಉಪನ್ಯಾಸಕಿಯಾಗಿ ಸೇವೆ ಸಲ್ಲಿಸುತ್ತಿದ್ದರು ಎಂದರೆ ಸರಿ. ಚಾಸಾ-1 ರವರು ಸಂತೆಕಟ್ಟೆಯಿಂದ ಕುಂದಾಪುರಕ್ಕೆ ಬಂದು ಹೋಗುತ್ತಿದ್ದು, ಆರೋಪಿ ಆಕೆಗೆ ಉದ್ಯೋಗವನ್ನು ಬಿಡಬೇಕೆಂದು ಹೇಳಿ ಆಕ್ಷೇಪ ಮಾಡುತ್ತಿದ್ದು, ಆಕೆಯನ್ನು ಉದ್ದೇಶಿಸಿ ಬೈದು ಬೆದರಿಕೆ ಹಾಕಿ ಕುತ್ತಿಗೆ ಒತ್ತಿ ಮಾನಸಿಕ ಹಿಂಸೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ತನ್ನ ತಂದೆ ತಾಯಿ, ಅಜ್ಜಿಯನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಎಂದು ಚಾಸಾ-1 ರವರ ಮೇಲೆ ಸುಳ್ಳು ಅಪಾದನೆ ಮಾಡಿ ನಮ್ಮ ಮನೆಯವರೊಂದಿಗೆ ಸಂಪರ್ಕ ಮಾಡಬಾರದೆಂದು, ತವರು ಮನೆಗೆ ಹೋಗಬಾರದೆಂದು ತಾಕೀತು ಮಾಡಿರುತ್ತಾನೆ ಎಂದರೆ ಸರಿಯಲ್ಲ.

2019, 2021 ಹಾಗೂ 2022 ರಲ್ಲಿ ಆರೋಪಿ ವಿದೇಶದಿಂದ ಊರಿಗೆ ಬರುತ್ತಿದ್ದು, ಸುಮಾರು 40 ದಿನ ಮತ್ತು 13 ದಿನ ಊರಿನಲ್ಲಿ ಇದ್ದು, ಪ್ರತಿ ಬಾರಿ ಊರಿಗೆ ಬಂದಾಗಲೂ ಚಾಸಾ-1 ರವರು ಅವರ ಮನೆಯರನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ, ನಮ್ಮ ಮನೆಯವರೊಂದಿಗೆ ಚೆನ್ನಾಗಿರುತ್ತಾರೆ ಎಂದು ಮೂದಲಿಸಿ ಹಿಂಸೆ ನೀಡುತ್ತಿದ್ದರು ಎಂದರೆ ಸರಿಯಲ್ಲ. ದಿಃ 14-06-2022 ರಂದು ಆರೋಪಿ ಊರಿಗೆ ಬಂದಿದ್ದು, ಚಾಸಾ-1 ರವರನ್ನು ದೂಷಿಸಿ ಸಿಟ್ಟು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಿಃ 08-07-2022 ರಂದು ಸಂತೆಕಟ್ಟೆ ಮನೆಯಿಂದ ಚಾಸಾ-1 ರವರನ್ನು ನಮ್ಮ ಮನೆಗೆ ಕಳುಹಿಸಿದ್ದು, ವಾಪಸ್ಸು ಬರಬಾರದೆಂದು ಬೆದರಿಕೆ ಹಾಕಿದ್ದು, ಚಾಸಾ-1 ರವರು ಬೇರೆ ದಾರಿ ಇಲ್ಲದೆ ತ್ರಾಸಿಯಲ್ಲಿರುವ ನಮ್ಮ ಮನೆಯಲ್ಲಿ ವಾಸವಾಗಿರುತ್ತಾರೆ ಸರಿಯಲ್ಲ. ಚಾಸಾ-1 ರವರು ಆರೋಪಿಯ ವಿರುದ್ದ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ.

ಈ ಬಗ್ಗೆ ಈ ಮೇಲೆ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸದ್ರಿ ಹೇಳಿಕೆಯನ್ನು ನಿಪಿ-7 ಎಂದು ಗುರುತಿಸಲಾಯಿತು. ಆರೋಪಿ ನನ್ನ ಭಾವನಾದ ಕಾರಣ ಆತನೊಂದಿಗೆ ರಾಜಿ ಮಾಡಿಕೊಂಡು ಆ ಕಾರಣಕ್ಕೆ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**